Received on 28/8/2020
WUP

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಶ್ರೀ ಕ್ಷತ್ರೀಯ.ವಿ.ಎಂ. ಗೆಜೆಟೆಡ್ ಮ್ಯಾನೇಜರ್ ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್‌ಆರ್‌ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ : 25.07.2019ರ ಸಂಖ್ಯೆ : ಕಾಶಿಇ/38/ ಬೋನೌ/ಹೈ.ಕ/ಜೇಪ/ಬಸ್ಥಾವಿ/2019-20 ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ **ಗೆಜೆಟೆಡ್ ಮ್ಯಾನೇಜರ್**ಗಳ ಅಂತಿಮ ಜ್ಯೇಷ್ಠತಾ ಪಟ್ಟಿ.
3. ದಿನಾಂಕ: 09.06.2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.

*****

<u>ಪ್ರಸ್ತಾವನೆ:</u>

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **ಸಹಾಯಕ ನಿರ್ದೇಶಕರ** ಹುದ್ದೆಗಳನ್ನು **ಗೆಜೆಟೆಡ್ ಮ್ಯಾನೇಜರ್** ಹುದ್ದೆಯಿಂದ ಶೇಕಡ 100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2) ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ಕಲ್ಯಾಣ-ಕರ್ನಾಟಕ ಪ್ರದೇಶದ ವ್ಯಾಪ್ತಿಯ **ಗೆಜೆಟೆಡ್ ಮ್ಯಾನೇಜರ್‌ಗಳ** ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ **ಸಹಾಯಕ ನಿರ್ದೇಶಕ** ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ಉಲ್ಲೇಖ (3)ರಲ್ಲಿ ದಿನಾಂಕ:09.06.2020ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ **ಸಹಾಯಕ ನಿರ್ದೇಶಕರ** ಹುದ್ದೆಗಳನ್ನು ಅರ್ಹ **ಗೆಜೆಟೆಡ್ ಮ್ಯಾನೇಜರ್**ಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅದರಂತೆ, ಶ್ರೀ ಕ್ಷತ್ರೀಯ ವಿ.ಎಂ. ಗೆಜೆಟೆಡ್ ಮ್ಯಾನೇಜರ್ ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ: ಕಾಶಿಇ/46/ಸ.ನಿ/ಬಡ್ತಿ/ಬಸ್ಥಾವಿ/2019-20, ಬೆಂಗಳೂರು ದಿನಾಂಕ:20.08.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಶ್ರೀ ಕ್ಷತ್ರೀಯ ವಿ.ಎಂ. ಗೆಜೆಟೆಡ್ ಮ್ಯಾನೇಜರ್ ಇವರಿಗೆ ವೇತನ ಶ್ರೇಣಿ **ರೂ. 43100-1100-46400-1250-53900-1450-62600-1650-72500-1900-83900ರಲ್ಲಿ** ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ **ಸಹಾಯಕ ನಿರ್ದೇಶಕರ** ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರ ಹೆಸರಿನ ಮುಂದೆ ಕಾಲಂ (4)ರಲ್ಲಿ ನಮೂದಾಗಿರುವ ಕಛೇರಿಯಲ್ಲಿ ಇರುವ ಖಾಲಿ ಹುದ್ದೆಗೆ ಎದುರಾಗಿ, ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

**<u>ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ (ಕೆ.ಕೆ.)</u>**

| ಕ್ರ. ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಕ್ಷತ್ರೀಯ ವಿ.ಎಂ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ. | ಪ್ರಾದೇಶಿಕ ಕಛೇರಿ, ಕಲಬುರಗಿ. | ಖಾಲಿ ಹುದ್ದೆಗೆ ಎದುರಾಗಿ |

ಬಡ್ತಿ ಹೊಂದಿರುವ ಸಹಾಯಕ ನಿರ್ದೇಶಕರು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಕಛೇರಿಯಲ್ಲಿ ಈ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯನ್ನು ರದ್ದುಪಡಿಸಲಾಗುವುದು. ಬಡ್ತಿ ಹೊಂದಿದ ಅಧಿಕಾರಿಯು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು –ಮಾಹಿತಿಗಾಗಿ.
2) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಕಲಬುರಗಿ – ಅಗತ್ಯಕ್ರಮಕ್ಕಾಗಿ.
3) ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ–ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
4) ಶ್ರೀ ವಿ.ಎಂ. ಕ್ಷತ್ರೀಯ, ಗೆಜೆಟೆಡ್ ಮ್ಯಾನೇಜರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
5) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್–ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
2. ಕಛೇರಿ ಪ್ರತಿ.